| | | | | | |
|---|---|---|---|---|---|
| **News Date** | 22-07-2017 | **Media Type** | Newspapers | **Publication Type** | Regional Daily Newspaper |
| **Publication** | Kannada Prabha | **Language** | Kannada | **Page No** | 5 |
| **Height** | 10 | **Cols** | 3 | | |
| **Agency** | Bureau | | | | |
| **Edition** | Bangalore | | | | |



# ಕರ್ಣಾಟಕ ಬ್ಯಾಂಕ್ ಹೊಸ ಯೋಜನೆ

## ಪಿಎನ್‌ಬಿ ಮೆಟ್‌ಲೈಫ್ ಸಹಯೋಗದಲ್ಲಿ 'ಮೆಟ್ ಲೋನ್ ಆ್ಯಂಡ್ ಲೈಫ್ ಸುರಕ್ಷಾ'

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಕರ್ಣಾಟಕ ಬ್ಯಾಂಕ್ ತನ್ನ ಜೀವ ವಿಮಾ ಪಾಲುದಾರ ಪಿಎನ್‌ಬಿ ಮೆಟ್‌ಲೈಫ್ ಸಹಯೋಗದಲ್ಲಿ ಶುಕ್ರವಾರ 'ಮೆಟ್ ಲೋನ್ ಆ್ಯಂಡ್ ಲೈಫ್ ಸುರಕ್ಷಾ' (ಎಂಎಲ್ ಎಲ್‌ಎಸ್) ಯೋಜನೆ ಬಿಡುಗಡೆಗೊಳಿಸಿದೆ.

ಪಿಎನ್‌ಬಿ ಮೆಟ್‌ಲೈಫ್‌ನೊಂದಿಗೆ 15 ವರ್ಷಗಳ ಪಾಲುದಾರಿಕೆಯ ನೆನಪಿಗಾಗಿ ಬ್ಯಾಂಕ್ 'ಕೆಬಿಎಲ್ ಎಂಎಲ್‌ಎಲ್‌ಎಸ್' ಆ್ಯಪ್ ಬ್ಯಾಂಕ್‌ನ ಸಿಬ್ಬಂದಿಗಾಗಿ ಪರಿಚಯಿಸಲಾಗಿದ್ದು, ಇನ್ಶೂರೆನ್ಸ್ ಕವರೇಜ್ ಮತ್ತು ಪ್ರೀಮಿಯಂ ಕುರಿತ ಲೆಕ್ಕಾಚಾರ ಮಾಡಲು ಇದು ಸಹಕಾರಿಯಾಗಲಿದೆ.

ಮಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಬ್ಯಾಂಕ್‌ನ ಆಡಳಿತ ನಿರ್ದೇಶಕ ಮತ್ತು ಸಿಇಒ ಮಹಾಬಲೇಶ್ವರ ಎಂ.ಎಸ್. ಮತ್ತು ಪಿಎನ್‌ಬಿ ಮೆಟ್‌ಲೈಫ್‌ನ ಬ್ಯಾಂಕ್ ಅಶ್ಯೂರೆನ್ಸ್ ನಿರ್ದೇಶಕ ಸಮೀರ್ ಬನ್ಸಾಲ್ 'ಮೆಟ್ ಲೋನ್ ಆ್ಯಂಡ್ ಲೈಫ್ ಸುರಕ್ಷಾ' ಯೋಜನೆ ಮತ್ತು 'ಕೆಬಿಎಲ್ ಎಂಎಲ್‌ಎಲ್‌ಎಸ್' ಆ್ಯಪ್ ಬಿಡುಗಡೆಗೊಳಿಸಿದರು.

ಬ್ಯಾಂಕ್‌ನ ಮುಖ್ಯ ಮಹಾ ಪ್ರಬಂಧಕ ರಾಘವೇಂದ್ರ ಭಟ್ ಎಂ., ಜನರಲ್ ಮ್ಯಾನೇಜರ್‌ಗಳಾದ ಚಂದ್ರಶೇಖರ್ ರಾವ್ ಬಿ., ಸುಭಾಷ್ಚಂದ್ರ ಪುರಾಣಿಕ್, ಬಾಲಚಂದ್ರ ವೈ.ವಿ, ಮುರಳೀಧರ್ ಕೃಷ್ಣ ರಾವ್, ನಾಗರಾಜ ರಾವ್ ಬಿ, ಪಿಎನ್‌ಬಿ ಮೆಟ್‌ಲೈಫ್‌ನ ಸಹ ನಿರ್ದೇಶಕ ಸಾಯಿ ಚಂದ್ರಶೇಖರ್ ರೆಡ್ಡಿ ಉಪಸ್ಥಿತರಿದ್ದರು.

ದೇಶದ 769 ಬ್ರಾಂಚ್‌ಗಳಲ್ಲಿಯೂ ಈ ಸೇವೆ ಗ್ರಾಹಕರಿಗೆ ದೊರೆಯಲಿದೆ.



ವಿಜಯವಾಣಿ ಚಿತ್ರ

ಕರ್ಣಾಟಕ ಬ್ಯಾಂಕ್ ಆಡಳಿತ ನಿರ್ದೇಶಕ ಮತ್ತು ಇಸಿಒ ಮಹಾಬಲೇಶ್ವರ ಎಂ.ಎಸ್. ಮತ್ತು ಪಿಎನ್‌ಬಿ ಮೆಟ್‌ಲೈಫ್‌ನ ಬ್ಯಾಂಕ್ ಅಶ್ಯೂರೆನ್ಸ್ ನಿರ್ದೇಶಕ ಸಮೀರ್ ಬನ್ಸಾಲ್ 'ಮೆಟ್ ಲೋನ್ ಆ್ಯಂಡ್ ಲೈಫ್ ಸುರಕ್ಷಾ' ಮತ್ತು 'ಕೆಬಿಎಲ್ ಎಂಎಲ್‌ಎಲ್‌ಎಸ್' ಆ್ಯಪ್ ಬಿಡುಗಡೆಗೊಳಿಸಿದರು.

ಗ್ರಾಹಕರ ಮತ್ತು ಪಾಲುದಾರರ ವಿಕಸಿತ ಬೇಡಿಕೆಗಳನ್ನು ನಮಸ್ಸಿನಲ್ಲಿಟ್ಟುಕೊಂಡು ಪಿಎನ್‌ಬಿ ಮೆಟ್‌ಲೈಫ್ ಉತ್ಪನ್ನಗಳನ್ನು ಸಿದ್ಧಪಡಿಸುತ್ತಿದೆ. ಕರ್ಣಾಟಕ ಬ್ಯಾಂಕ್‌ನೊಂದಿಗೆ ಹೊಂದಿರುವ 15 ವರ್ಷಗಳ ಪಾಲುದಾರಿಕೆ ನಮ್ಮನ್ನು ಶಕ್ತಿಶಾಲಿಯನ್ನಾಗಿಸಿರುವುದರ ಜತೆಗೆ ಸುಮಾರು 2 ಲಕ್ಷದಷ್ಟು ಜನರನ್ನು ಸಂಪಾದಿಸಲು ಸಾಧ್ಯವಾಗಿದೆ. ಅನಿರೀಕ್ಷಿತ ಸಂದರ್ಭ ಸಾಲಗಾರ ಕುಟುಂಬದ ಆರ್ಥಿಕ ಸ್ಥಿರತೆ ಒದಗಿಸುವಲ್ಲಿ ಎಂಎಲ್ ಎಲ್‌ಎಸ್ ಸಹಕಾರಿಯಾಗಲಿದೆ.

| ಸಮೀರ್ ಬನ್ಸಾಲ್ ಪಿಎನ್‌ಬಿ ಮೆಟ್‌ಲೈಫ್‌ನ ಬ್ಯಾಂಕ್ ಅಶ್ಯೂರೆನ್ಸ್ ನಿರ್ದೇಶಕ

ಪಿಎನ್‌ಬಿ ಮೆಟ್‌ಲೈಫ್‌ನೊಂದಿಗೆ 15 ವರ್ಷ ಯಶಸ್ವಿ ಪಾಲುದಾರಿಕೆ ಹೊಂದಿದ್ದು, ಪ್ರಸ್ತುತ ಎಂಎಲ್‌ಎಲ್‌ಎಸ್ ಸಿಂಗಲ್ ಏಕ ಪ್ರೀಮಿಯಂ ಯೋಜನೆ ಜಾರಿಗೊಳಿಸಲು ಹರ್ಷವಾಗುತ್ತಿದೆ. ಎಲ್ಲ ಗ್ರಾಹಕರು ತಮ್ಮ ಸಾಲಗಳನ್ನು ಎಂಎಲ್‌ಎಲ್‌ಎಸ್‌ನೊಂದಿಗೆ ರಕ್ಷಿಸಲು ಸಲಹೆ ನೀಡುತ್ತೇನೆ. ಸಾಲದ ಹೊಣೆಗಾರಿಕೆ ಕುರಿತಂತೆ ಕುಟುಂಬದ ಸದಸ್ಯರಿಗೆ ಇದರಿಂದ ನೆಮ್ಮದಿ ದೊರೆಯಲಿದೆ.

| ಮಹಾಬಲೇಶ್ವರ ಎಂ.ಎಸ್. ಕರ್ಣಾಟಕ ಬ್ಯಾಂಕ್ ಎಂಡಿ/ಸಿಇಒ